ಕಲ್ಪನೆ ಕಾವ್ಯ



## ಗಾಂಧಿಯ ಮಂಗಗಳು

ಜೀವಂತ ಹರಿದರೆ ಬೆತ್ತದ ಸೇವೆ
ಕಲ್ಲಿನಲಿ ಮೂಡಿದರೆ ಕುಂಕಮದ ಅರ್ಚನೆ
ನಾನು ನಾಗರ

ಕಾಡಿನಿಂದ ನುಗ್ಗಿದರೆ ಹಾವಳಿ
ಕಲ್ಲಿನಲಿ ಗಜಮುಖನಾದರೆ ಪ್ರಭಾವಳಿ
ನಾನು ವಿನಾಯಕ

ರೈತನೆದುರು ಮಂಡಿಯೂರಿದರೆ ಕುಂಟೆತ್ತು
ಶಿವನೆದುರು ಪವಡಿಸಿದರೆ ಮಹಾನಂದಿ
ನಾನು ಒಂಟಿ ಬಸವ

ನಿರ್ಜೀವಗಳಿಗೆ ಇಲ್ಲಿ ನಾಮ
ಜೀವಗಳಿಗೆ ಮೂರು ನಾಮ
ಮೌನವಾಗಿರುವ ನಾವು
ಗಾಂಧಿ ಸೃಜಿಸಿದ ಮಂಗಗಳು

**● ಪಾರ್ವತಿ ಚೀರನಹಳ್ಳಿ**

## ಕಲ್ಲ ದೇವರ ಮಾಡಿ

ಕಲ್ಲ ದೇವರುಗಳಾಗಿ ಕುಳಿತಿದ್ದಾರೆ
ನಂದಿ ಕರಿಮುಖ ನಾಗರ
ಜೀವಂತವಾಗಿ ಕುಳಿತಿರುವುದು ಮಾತ್ರ
ಮಂಗಗಳ ಪುಟ್ಟ ಸಂಸಾರ

ಇಲ್ಲಾದರೂ ಸಿಗಬಹುದೆ!
ಒಂದು ಹಸಿರು ಹಣ್ಣಿನ ಮರ
ಎಂಬ ಕಣ್ಣ ತುಂಬ ಕಾತುರ

ವಿಷ ಉಣಿಸುವವರು
ಕಂದಕಗಳಿಗೆ ಬಿಸಾಡುವವರು
ಹೆಚ್ಚಾಗಿದ್ದಾರೆ ಈಗ ಕಟುಕರು

ಪೂಜೆಗೆ ಬೇಕಿರುವ
ಕಲ್ಲ ವಿಗ್ರಹಗಳ ಮಾಡಿಕೊಳ್ಳಿ
ಎನ್ನುತ್ತಿದ್ದಾರೆ ಆ ನಿರಾಶ್ರಿತರು...

**● ಜರಗನಹಳ್ಳಿ ಶಿವಶಂಕರ್**